ಆರ್ ಬಿ ಐ / 2005–06 /331
ಡಿಬಿಒಡಿ :ಸಂಖ್ಯೆ .ಬಿಎಲ್. ಬಿಸಿ. 72/ 22.01.009 / 2005–06

ಮಾರ್ಚ್ 22,2006
ಚೈತ್ರ 01,1928 (ಶಕ)

ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸ್ಥಳೀಯ ಪ್ರದೇಶ ಬ್ಯಾಂಕುಗಳು
ಸೇರಿದಂತೆ ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು)

ಮಾನ್ಯರೆ,

**ಬ್ಯಾಂಕಿಂಗ್ ಸೇವೆಗಳನ್ನು ವಿಸ್ತರಿಸುವ ಮೂಲಕ ಹಣಕಾಸಿನ ಸೇರ್ಪಡೆ – ವ್ಯಾಪಾರ ಸುಗಮಕಾರರು ಮತ್ತು ಬಾತ್ಮೀದಾರರ ಬಳಕೆ**

_ ಮೇಲಿನ ವಿಷಯದ ಬಗ್ಗೆ ದಿನಾಂಕ ಜನವರಿ 25, 2006 ರಂದು ಹೊರಡಿಸಿರುವ ನಮ್ಮ ಸುತ್ತೋಲೆ ಡಿಬಿಒಡಿ. ಸಂಖ್ಯೆ .ಬಿಎಲ್. ಬಿಸಿ. 58 /22.01.001 / 2005 – 2006 ನ್ನು ದಯವಿಟ್ಟು ನೋಡಿ.

2. ಮೇಲಿನ ಸುತ್ತೋಲೆಯ ಅನ್ವಯ "ವ್ಯವಹಾರ ಬಾತ್ಮೀದಾರ" ಮಾದರಿ ಅಡಿಯಲ್ಲಿ ಸಾರ್ವಜನಿಕ ಠೇವಣಿಗಳನ್ನು ಅಂಗೀಕರಿಸದ ನೋಂದಾಯಿತ ಎನ್‌ಬಿಎಫ್‌ಸಿಗಳು, ಬ್ಯಾಂಕುಗಳು ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿಕೊಳ್ಳಬಹುದಾದ ಘಟಕಗಳಲ್ಲಿ ಸೇರಿದವರಾಗಿರುತ್ತಾರೆ. ಬ್ಯಾಂಕುಗಳು ವ್ಯವಹಾರ ಬಾತ್ಮೀದಾರನ /ರ ಪಾತ್ರವನ್ನು ವಹಿಸಿಕೊಡಬಹುದಾದ ಎನ್‌ಬಿಎಫ್‌ಸಿ ಗಳ ಅರ್ಹತಾ ಮಾನದಂಡ ಮುಂತಾದವುಗಳ ಪರಿಶೀಲನೆ ಕಾರ್ಯದಲ್ಲಿ ಆರ್‌ಬಿಐ ತೊಡಗಿದೆ. ಈ ಕಾರ್ಯ ಬಾಕಿಯಿರುವುದರಿಂದ ಎನ್‌ಬಿಎಫ್‌ಸಿಗಳನ್ನು ವ್ಯವಹಾರ ಬಾತ್ಮೀದಾರನಾಗಿ / ರಾಗಿ ಆಯ್ಕೆ ಮಾಡಿಕೊಳ್ಳುವುದನ್ನು / ಬಳಸಿಕೊಳ್ಳುವುದನ್ನು ಮುಂದೂಡುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಆದಾಗ್ಯೂ, ಬ್ಯಾಂಕುಗಳು ಕಂಪನಿಗಳ ಅಧಿನಿಯಮ, 1956 ರ 25ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ಪಡೆದಿರುವ ಎನ್‌ಬಿಎಫ್‌ಸಿಗಳನ್ನು ವ್ಯವಹಾರ ಭಾತ್ಮೀದಾರರನ್ನಾಗಿ ಬಳಸಿಕೊಳ್ಳಬಹುದು.

**ತಮ್ಮ ವಿಶ್ವಾಸಿ,**

**( ಪಿ .ವಿಜಯ ಭಾಸ್ಕರ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕ**